ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 26 ಚಾಸಾ- 37**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ನವೀನ್ ಬಿ ಸಿ |
| ತಂದೆಯ ಹೆಸರುಃ | : | ಚಿಕ್ಕಮುದ್ದಯ್ಯ ಬಿ ಸಿ |
| ವಯಸ್ಸುಃ | : | 40 ವರ್ಷ |
| ಉದ್ಯೋಗಃ | : | ಕಾರ್ಯನಿರ್ವಾಹಕ ಇಂಜಿನಿಯರ್ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 21-02-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ದಿಃ17-3-2008ರಿಂದ 17.07.2013ರವರೆಗೆ ನಾನು ಚನ್ನರಾಯಪಟ್ಟಣ ಚೆಸ್ಕಾಂ ನ ಒ ಅಂಡ್ ಎಂ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಲೋಕಾಯುಕ್ತ ಉಪಾಧೀಕ್ಷಕರು 11.05.2009ರಂದು ನಮ್ಮ ಕಛೇರಿಗೆ ಪತ್ರ ಬರೆದು ಸಿ.ಎಸ್. ರಂಗಸ್ವಾಮಿ ಕಂಡಕ್ಟರ್ ಕೆ.ಎಸ್.ಆರ್.ಟಿ.ಸಿ. ಡಿಪೋ ಚನ್ನರಾಯಪಟ್ಟಣ, ಇವರಿಗೆ ಸಂಬಂಧಪಟ್ಟಂತೆ ವಿದ್ಯುತ್ ಶುಲ್ಕದ ಕುರಿತಂತೆ ಮಾಹಿತಿ ಕೇಳಿರುತ್ತಾರೆ. ಅದರಂತೆ ನಾನು ನಮ್ಮ ಕಛೇರಿಯಲ್ಲಿ ನಿರ್ವಹಿಸಿರುವ ದಾಖಲೆಗಳ ಆಧಾರದಲ್ಲಿ ಮಾಹಿತಿಯನ್ನು ನೀಡಿರುತ್ತೇನೆ. ಸ್ಥಾವರ ಸಂಖ್ಯೆ ಸಿ1968 ಮುಖ್ಯ ಇಂಜಿನಿಯರ್ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್ ಚನ್ನರಾಯಪಟ್ಟಣ ಇವರ ಹೆಸರಿನಲ್ಲಿದ್ದು

ಅದಕ್ಕೆ 23-11-1981ರಂದು ಸಂಪರ್ಕವನ್ನು ನೀಡಿದ್ದು ಅದಕ್ಕೆ 160 ವ್ಯಾಟ್ಸ್ ಮಂಜೂರಾಗಿದ್ದು, ಠೇವಣಿಯಾಗಿ 470ರೂಗಳನ್ನು ಪಾವತಿಸಿರುತ್ತಾರೆ. ಈ ಸ್ಥಾವರಕ್ಕೆ ಏಪ್ರಿಲ್ 2009ರ ಅಂತ್ಯಕ್ಕೆ ಯಾವುದೇ ಕಂದಾಯ ಬಾಕಿ ಇರಲಿಲ್ಲ ಎನ್ನುವುದು ಕಂಡುಬಂತು.

2. ಹಾಗೆಯೇ ಸ್ಥಾವರ ಸಂಖ್ಯೆ ಸಿ5704 ಬಾಲಸುಬ್ರಹ್ಮಣ್ಯಗೌಡ ಬಿನ್ ಭೋಜಪ್ಪ, ಚನ್ನರಾಯಪಟ್ಟಣ ಇವರ ಹೆಸರಿನಲ್ಲಿದ್ದು ಅದಕ್ಕೆ ದಿ:4-9-1994ರಲ್ಲಿ ಸಂಪರ್ಕನೀಡಿದ್ದು, ಅದಕ್ಕೆ 920 ವ್ಯಾಟ್ಸ ಮಂಜೂರಾಗಿದ್ದು, ಗ್ರಾಹಕರು ಠೇವಣಿಯಾಗಿ 310 ರೂಗಳನ್ನು ಪಾವತಿಸಿದ್ದು ಏಪ್ರಿಲ್ 2009ರ ಅಂತ್ಯಕ್ಕೆ 137ರೂಪಾಯಿ ಬಾಕಿ ಇತ್ತು.

3. ಸ್ಥಾವರಸಂಖ್ಯೆ ಸಿ 4771 ಮತ್ತು ಸ್ಥಾವರ ಸಂಖ್ಯೆ ಸಿ 4772 ಇವುಗಳು ಗೋವಿಂದೇಗೌಡ ಅಗ್ರಹಾರ, ಚನ್ನರಾಯಪಟ್ಟಣ ಇವರ ಹೆಸರಿನಲ್ಲಿದ್ದು ಅದಕ್ಕೆ ದಿ:30-4-1992ರಲ್ಲಿ ಸಂಪರ್ಕನೀಡಿದ್ದು, ಅದಕ್ಕೆ 160 ವ್ಯಾಟ್ಸ ಮಂಜೂರಾಗಿದ್ದು, ಗ್ರಾಹಕರು ಠೇವಣಿಯಾಗಿ 310 ಮತ್ತು 135ರೂಗಳನ್ನು ಪಾವತಿಸಿದ್ದು ಏಪ್ರಿಲ್ 2009ರ ಅಂತ್ಯಕ್ಕೆ ಸ್ಥಾವರ ಸಂಖ್ಯೆ 4771ಕ್ಕೆ 180ರೂಪಾಯಿ ಬಾಕಿ ಇತ್ತು. ಇನ್ನೊಂದು ಸ್ಥಾವರಕ್ಕೆ ಬಾಕಿ ಇರಲಿಲ್ಲ.

4. ಸಿ.ಐ ಪಿ 191 ಇದು ಬಾಲಕೃಷ್ಣೇಗೌಡ ಬಿನ್ ಭೋೀಜಪ್ಪ ರವರ ಹೆಸರಿನಲ್ಲಿದ್ದು ಅದಕ್ಕೆ ದಿ:8-2-1993ರಲ್ಲಿ ಸಂಪರ್ಕ ನೀಡಿದ್ದು, ಅದಕ್ಕೆ 3 ಹೆಚ್.ಪಿ. ಮಂಜೂರಾಗಿದ್ದು, ಗ್ರಾಹಕರು ಠೇವಣಿಯಾಗಿ 150 ರೂಗಳನ್ನು ಪಾವತಿಸಿದ್ದು ಏಪ್ರಿಲ್ 2009ರ ಅಂತ್ಯಕ್ಕೆ 32,500ರೂಪಾಯಿ ಬಾಕಿ ಇತ್ತು.

ಈ ಎಲ್ಲಾ ವಿವರಗಳೊಂದಿಗೆ ಮತ್ತು ಈ ನಾಲ್ಕೂ ಸ್ಥಾವರಗಳ ಮೇ 2006ರಿಂದ ಏಪ್ರಿಲ್ 2009ರವರೆಗಿನ ಆರಂಭಿಕ ಶುಲ್ಕ, ಬೇಡಿಕೆ, ವಸೂಲಾತಿ ಮತ್ತು ಅಂತಿಮ ಶುಲ್ಕಗಳ ವಿವರಗಳೊಂದಿಗೆ ದಿ:20.05.2009ರಂದು ಮಾಹಿತಿಯನ್ನು ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-66 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-66(ಎ) ಎಂದು ಗುರುತಿಸಲಾಯಿತು. ಅವು ಒಟ್ಟು 4 ಹಾಳೆಗಳನ್ನೊಳಗೊಂಡಿರುತ್ತದೆ.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಬಿ.ಜೆ.ಪಿ.ಎಸ್ **ವಕೀಲರಿಂದಃ**

ನಿಪಿ-66ರ ಯಾವ ಸ್ಥಾವರ ಕೂಡ ರಂಗಸ್ವಾಮಿಯ ಹೆಸರಿನಲ್ಲಿ ಇಲ್ಲ ಎಂದರೆ ನಿಜ. ಬಾಲಸುಬ್ರಹ್ಮಣ್ಯಗೌಡ, ಗೋವಿಂದೇಗೌಡ ಇವರು ರಂಗಸ್ವಾಮಿಗೆ ಯಾವ ರೀತಿ ಸಂಬಂಧಪಟ್ಟವರು ಎಂಬುದು ನನಗೆ ಗೊತ್ತಿಲ್ಲ ಎಂಬುದು ನಿಜ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**